**2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ**
**ಸಿ.ಸಿ.ನಂಃ 613 ಃ2023**

| | | | |
|---|---|---|---|
| ಸಾಕ್ಷಿದಾರನ ಹೆಸರು | ಗುರುಪಾದ ಲಂಗೋಟಿ | ಸಿ ಡಬ್ಲ್ಯು | 3 |
| ತಂದೆಯ ಹೆಸರು | ಪವಾಡೆಪ್ಪ | ಪಿ ಡಬ್ಲ್ಯು | 2 |
| ವಯಸ್ಸು | 29 ವರ್ಷ | | |
| ಉದ್ಯೋಗ | ಅಬಕಾರಿ ಪೇದೆ | | |
| ವಾಸಸ್ಥಾನ | ತಾತಾಗುಣಿ, ಬೆಂಗಳೂರು | | |

**ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 20.12.2023.**

**ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-**

ನಾನು ನವೆಂಬರ್-2019 ರಿಂದ ಬನಶಂಕರಿ ಅಬಕಾರಿ ವಲಯ-37 ರಲ್ಲಿ ಅಬಕಾರಿ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ 21.04.2022 ರಂದು ಚಾಸಾ-1 ರವರ ಜೊತೆ ನಾನು, ಚಾಸಾ-2, ಚಾಸಾ-4 ರಿಂದ ಚಾಸಾ-7 ರವರು ಗಸ್ತಿನಲ್ಲಿ ಇದ್ದೆವು. ಆಗ ಚಾಸಾ-1 ರವರಿಗೆ ಭಾತ್ಮೀದಾರರಿಂದ ದ್ವಿ ಚಕ್ರ ವಾಹನ ಸಂ. ಕೆಎ-05-ಹೆಚ್.ಎಸ್-8335 ರಲ್ಲಿ ಒಬ್ಬ ವ್ಯಕ್ತಿ ಗಾಂಜಾ ಮಾರಾಟ ಮಾಡುವ ಉದ್ದೇಶದಿಂದ ಯಾದಳಂ ನಗರ ಪ್ರದೇಶದಲ್ಲಿ ಹೋಗುತ್ತಾರೆ ಎಂದು ಮಾಹಿತಿ ಬಂತು. ಅದರಂತೆ ರಾತ್ರಿ 8.30 ಗಂಟೆಗೆ ಯಾದಳಂ ನಗರ ಪ್ರದೇಶಕ್ಕೆ ಬಂದು ಕೆಲವು ಸಾರ್ವಜನಿಕರ ಬಳಿ ಪಂಚರಾಗಿ ಸಹಕರಿಸಲು ಕೇಳಿದೆವು, ಆದರೆ ಅವರು ಅದಕ್ಕೆ ನಿರಾಕರಿಸಿದರು. ಆದ್ದರಿಂದ ಚಾಸಾ-1 ರವರು ಸಿಬ್ಬಂದಿಗಳನ್ನೇ ಪಂಚರನ್ನಾಗಿ ಮಾಡಿ ನೋಟೀಸು ನೀಡಿ ಅದಕ್ಕೆ ಸಹಿ ಪಡೆದರು. ನಿಪಿ-2 ರಲ್ಲಿರುವ ನನ್ನ ಸಹಿಯನ್ನು ನಿಪಿ-2 ಬಿ ಎಂದು ಗುರ್ತಿಸಿದ್ದೇನೆ. ನಂತರ ನಾವು ಸ್ವಲ್ಪ ಹೊತ್ತು ಅಲ್ಲಿ ಕಾದೆವು. ಆಗ ಚಾಸಾ-1 ರವರು ಮತ್ತು ನಮ್ಮ ಇಲಾಖಾ ವಾಹನ ನಾವು ಇದ್ದ ಸ್ಥಳದಿಂದ ಸುಮಾರು 100 ಮೀಟರ್ ದೂರದಲ್ಲಿ ಇತ್ತು. ಸ್ವಲ್ಪ ಸಮಯದ ನಂತರ ನಮಗೆ ಭಾತ್ಮಿ ಬಂದ ಸಂಖ್ಯೆಯ ವಾಹನ ಬರುತ್ತಿರುವುದು ಕಂಡು ಬಂತು. ಸದರಿ ವಾಹನವನ್ನು ತಡೆದು ನಿಲ್ಲಿಸಿದೆವು. ಆಗ ವಾಹನದಲ್ಲಿದ್ದ ವ್ಯಕ್ತಿ ಸ್ವಲ್ಪ ಗಾಬರಿ ಆದರು. ಅದೇ ಸಮಯಕ್ಕೆ ಚಾಸಾ-1 ರವರು ಸ್ಥಳಕ್ಕೆ ಬಂದರು. ನಂತರ ಸದರಿ ವಾಹನವನ್ನು ಪರಿಶೀಲನೆ ಮಾಡಿದಾಗ ಸದರಿ ವಾಹನದ ಡಿಕ್ಕಿಯಲ್ಲಿ ಒಂದು ಪ್ಲಾಸ್ಟಿಕ್ ಕವರ್ ಇತ್ತು. ಅದನ್ನು ಚಾಸಾ-1 ರವರು ತೆರೆದು ನೋಡಿದರು. ಅದರಲ್ಲಿ ಬರುತ್ತಿದ್ದ ವಾಸನೆಯನ್ನು ಹಾಗೂ ಚಾಸಾ-1

ರವರ ಅನುಭವದ ಮೇರೆಗೆ ಸದರಿ ಕವರಿನಲ್ಲಿದ್ದ ವಸ್ತು ಗಾಂಜಾ ಎಂದು ಖಚಿತಪಡಿಸಿಕೊಂಡರು. ಅದರಲ್ಲಿ ಇದ್ದ ಒಣ ಗಾಂಜಾವನ್ನು ತೂಕ ಮಾಡಿದಾಗ 540 ಗ್ರಾಂ ಇತ್ತು. ನಂತರ ಸದರಿ ವಾಹನ ಸವಾರನ ಹೆಸರು ಹಾಗೂ ವಿಳಾಸ ಕೇಳಿದಾಗ ಆತ ತನ್ನ ಹೆಸರು ಶಿವಕುಮಾರ್ ಬಿನ್ ಆಂದಾನಯ್ಯ, ವಾಸುದೇವಪುರ ಎಂದು ಹೇಳಿದರು. ಆತನ ಬಳಿ ವಿಚಾರಿಸಿದಾಗ ಆತ ಸದರಿ ಗಾಂಜಾವನ್ನು ತಾನು ಮಾರಾಟಕ್ಕೆ ಹಾಗೂ ಸೇವನೆಗೆ ತಂದಿರುವುದಾಗಿ ತಿಳಿಸಿದರು. ನಂತರ ಸ್ಥಳದಲ್ಲಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಆತನನ್ನು ದಸ್ತಗಿರಿ ಮಾಡಿ ಆತನ ಬಳಿ ಇದ್ದ ಗಾಂಜಾವನ್ನು ಹಾಗೂ ವಾಹನವನ್ನು ವಶಕ್ಕೆ ತೆಗೆದುಕೊಂಡು ಗಾಂಜಾಗೆ ಇಲಾಖೆಯ ಮುದ್ರೆಯನ್ನು ಹಾಕಿ ಅಮಾನತ್ತುಪಡಿಸಿಕೊಳ್ಳಲಾಯಿತು. ಸ್ಥಳದಲ್ಲಿ ಮಹಜರು ಮಾಡಿ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡರು. ನಿಪಿ-1 ರಲ್ಲಿರುವ ನನ್ನ ಸಹಿಯನ್ನು ನಿಪಿ-1 ಬಿ ಎಂದು ಗುರ್ತಿಸಿದ್ದೇನೆ. ವಾಹನ ಸವಾರ ನ್ಯಾಯಾಲಯ ಮುಂದೆ ಇರುವ ಆರೋಪಿ ಆಗಿರುತ್ತಾರೆ. ಆತನನ್ನು ನೋಡಿ ಗುರ್ತಿಸುತ್ತಿದ್ದೇನೆ. ಅಮಾನತ್ತುಪಡಿಸಿಕೊಂಡ ಗಾಂಜಾ ಹಾಗೂ ದ್ವಿ ಚಕ್ರ ವಾಹನವನ್ನು ನೋಡಿದರೆ ಗುರ್ತಿಸುತ್ತೇನೆ. ಅಮಾನತ್ತುಪಡಿಸಿಕೊಂಡ ಗಾಂಜಾವನ್ನು ನೋಡಿ ಗುರ್ತಿಸುತ್ತಿದ್ದು ಅದನ್ನು ನಿಪಿ-3 ಮತ್ತು 4 ರ ಫೊಟೋಗಳ ಮೂಲಕ ನೋಡಿ ಗುರ್ತಿಸುತ್ತಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಹಾಜರಿದ್ದು, ವಕೀಲರು ಗೈರು ಹಾಜರಿದ್ದು ಪಾಟೀ ಸವಾಲನ್ನು ಮುಂದೂಡಲು ಯಾವುದೇ ಸಕಾರಣ ಇರುವುದಿಲ್ಲ, ಆದ್ದರಿಂದ ಪಾಟೀ ಸವಾಲನ್ನು ಇಲ್ಲವೆಂದು ಪರಿಗಣಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇದೆ**

**(ವೇದಮೂರ್ತಿ ಬಿ.ಎಸ್.)**

**2ನೇ ಅ ಮು ಮ ದಂ.**